'ನನ್ನ ಗೆಳೆಯ ಶೈನಿ ಇಲ್ಲಿ ತಾಂತ್ರಿಕ ಹಾಗೂ ಸರಬರಾಜು ವಿಭಾಗದಲ್ಲಿ ಕೆಲಸ ನಿರ್ವಹಿಸುತ್ತಿದ್ದಾನೆ. ಅವನನ್ನು ಕಾಣಬೇಕಿದೆ.' ಅದಕ್ಕೆ ಸ್ವಾಗತಕಾರಿಣಿಯು ಕೂಡಲೇ ಉಲಿದಿತ್ತು.

'ಮಿ. ಅವಿರತ್, ಶೈನಿ ಅವರ ದಿನದ ನಿಶ್ಚಿತ ಭೇಟಿ ವಿವರಗಳಲ್ಲಿ ನಿಮ್ಮ ಹೆಸರಿದೆ. ನೀವು ಈಗಲೇ ಹೋಗಬಹುದು' ಎಂದು ಸವಿನಯವಾಗಿ ಕೈ ಸನ್ನೆ ಮೂಲಕ ಮಾರ್ಗ ತೋರಿಸಿತ್ತು.

ಅವಿರತ್ ಹೊರಡುವ ಮುನ್ನ ಆ ಸ್ವಾಗತಕಾರಿಣಿ ಅವನು ಹಾಕಿಕೊಂಡಿದ್ದ ವಸ್ತ್ರದ ಮೇಲಿನ ಗುರುತಿನ ಚಿಹ್ನೆಯನ್ನು ತನ್ನ ಕಣ್ಣಿನಿಂದಲೇ ಸ್ಕ್ಯಾನ್ ಮಾಡಿ ದಾಖಲಿಸಲು ಮರೆಯಲಿಲ್ಲ. ಹಿಂದಿನ ಮುನಿಸು ಮರೆತಂತೆ ಅವಿರತ್ ಹನ್ಸಾಳಿಗೆ ತನ್ನೊಂದಿಗೆ ಬರಲು ಕೈ ಸನ್ನೆ ಮಾಡಿ ಒಂದು ಗಾಜಿನಂತಿದ್ದ ಮಾರ್ಗ ವಿಥಿಯಲ್ಲಿ ಕರೆದೊಯ್ದ. ಅವನು ಆತ್ಮವಿಶ್ವಾಸದಿಂದ ಹೆಜ್ಜೆ ಹಾಕುತ್ತಿದ್ದುದನ್ನು ನೋಡಿ ಅವನು ಈ ಹಿಂದೆ ಇಲ್ಲಿಗೆ ಬಂದಿರಬೇಕೆಂದು ಊಹಿಸಿದಳು. ಅವರಿಬ್ಬರು ಗಾಜಿನ ಮಾರ್ಗವಿಥಿಯಲ್ಲಿ ಹೋಗುತ್ತಿರುವಾಗಲೇ ಬಿಳಿಯ ಪಾರಿವಾಳವೊಂದು ಹಾರುತ್ತಾ ಅವರಿಗೆ ಮಾರ್ಗ ತೋರಿಸತೊಡಗಿತ್ತು.

ಆ ಪಾರಿವಾಳವನ್ನು ಇಲ್ಲಿನ ಸಿಬ್ಬಂದಿಗಳೇ ಸಾಕಿರಬೇಕೆಂದು ಹನ್ಸಾ ಎಣಿಸಿದಳು. ಅವರು ಒಂದು ಹಸಿರು ಬಣ್ಣದ ಗಾಜಿನ ಕಟ್ಟಡದೊಳಗೆ ಕಾಲಿರಿಸುತ್ತಿದ್ದಂತೆಯೇ ಅದರ ಗೋಡೆಗಳು ಪಾರದರ್ಶಕವಾಗಿವೆ ಎಂಬುದು ಮನವರಿಕೆಯಾಗಿತ್ತು. ಆಚೆಗಿನ ಪರಿಸರದ ನೋಟ ಕಾಣಸಿಕ್ಕು ಸೂರ್ಯರಶ್ಮಿಯ ತೀಕ್ಷ್ಣ ವಿಕಿರಣಗಳು ಒಳ ಪ್ರವೇಶಿಸದಂತೆ ಗೋಡೆಯಲ್ಲಿನ ಸೂಕ್ಷ್ಮ ಫಿಲ್ಟರ್‌ಗಳಿಂದ ತಡೆಯುತ್ತಿದ್ದುದನ್ನು ಕೇಳಿದ್ದಳು. ಆದರೆ ಒಳಪ್ರವೇಶಿಸಿದಾಗ ಅವರು ಎದುರಾಗಬೇಕಿದ್ದ ಕಾರ್ಯಾಗಾರವಿರದೆ ಕೇವಲ ವಿತರಣಾ ಸೆಲ್ ಇದ್ದುದು ಕಂಡುಬಂದಿತ್ತು. ಅವರಿಗೆ ದಿಕ್ಸೂಚಿಯಾಗಿದ್ದ ಪಾರಿವಾಳ ನಿಲ್ಲದೆ ಒಳಹಾರಿ ಅವರ ಆಗಮನದಿಂದ ತೆರೆದುಕೊಂಡ ದ್ವಾರದ ಮೂಲಕ ಮತ್ತೊಂದು ಮಾರ್ಗವಿಥಿಯಲ್ಲಿ ನೆಲ ಅಂತಸ್ತಿಗೆ ಕರೆದೊಯ್ದಿತ್ತು.

ಪಾರಿವಾಳದ ಮಾರ್ಗದರ್ಶನವಲ್ಲದೆ ಅವಿರತ್ ಈ ಹಿಂದೆ ಇಲ್ಲಿಗೆ ಬಂದವನಾದ್ದರಿಂದ ಅವರುಗಳನ್ನು ಹಿಂಬಾಲಿಸಿ ಹೋಗದೆ ಹನ್ಸಾಳಿಗೆ ಬೇರೆ ವಿಧಿ ಇರಲಿಲ್ಲ. ಸಾಧಾರಣವಾಗಿ ತನ್ನ ಸಹಾಯಕ ರೊಬೋಗಳಿಗೆ ನಿಯಮಿತವಾಗಿ ಚೆಕ್ ಅಪ್ ದಿನಾಂಕಗಳಂದು ಇಲ್ಲಿಗೆ ಕಳುಹಿಸುತ್ತಿದ್ದು, ಅವುಗಳ ಪರೀಕ್ಷೆ ಮುಗಿದ ಬಳಿಕ ಸಂಚಾರ ನಿಯಂತ್ರಣ ಕೇಂದ್ರದಲ್ಲಿ ಇರಿಸಲಾಗುತ್ತಿತ್ತು. ಆದರೆ ಈಗ ತನ್ನ 'ಎಕ್ಸ್' ರೊಬೋಗೆ ಆದ ಊನ ಅದನ್ನು ಯಾವ ಸ್ಥಿತಿಗೆ ತಳ್ಳಿದೆಯೋ ಎಂಬ ಆತಂಕದಿಂದ ಸ್ಥಿತಿಗತಿ ವಿಚಾರಿಸಲು ಇಲ್ಲಿಗೆ ಬರಲು ನಿರ್ಧರಿಸಿದ್ದಳು.

ಕೆಲ ಹೊತ್ತಿಗೇ ಅವಿರತ್‌ನ ಗೆಳೆಯ ಶೈನಿ ಇದ್ದ ವರ್ಕ್ ಸ್ಟೇಷನ್ ಎದುರಾಗಿತ್ತು. ಆದರೆ ಅದರ ಹೊರಗೆ ಹಾಕಲಾದ ಪ್ರತಿಫಲನಾ ಫಲಕದಲ್ಲಿ 'ರೊಬೋ ಕ್ಲಿನಿಕ್' ಎಂದು ನಮೂದಾಗಿದ್ದನ್ನು ಕಂಡು ಚಕಿತಳಾದಳು. ಅವರು ದ್ವಾರದ ಬಳಿ ಬರುತ್ತಿದ್ದಂತೆಯೇ ಪಾರಿವಾಳವು ತನ್ನ ನೆಲೆ ಕಂಡುಕೊಂಡಂತೆ ಗೋಡೆಗೆ ಆತುಕೊಂಡ ಒಂದು ಸ್ಟ್ಯಾಂಡ್ ಮೇಲೆ ವಿರಮಿಸಿತ್ತು. ದ್ವಾರದ ಬಳಿಯ ಧ್ವನಿವರ್ಧಕದಿಂದ ಧ್ವನಿಯೊಂದು ಸೆನ್ಸಾರ್ ಮೂಲಕ ಅವರನ್ನು ಗುರುತಿಸುತ್ತಾ 'ಸ್ವಾಗತ ಅವಿರತ್ ಹಾಗೂ ಹನ್ಸಾರವರಿಗೆ' ಎಂದು ಸವಿನಯವಾಗಿ ಉಲಿದು ದ್ವಾರವೇ ಇಬ್ಭಾಗವಾದಂತೆ ಪಕ್ಕಕ್ಕೆ ಸರಿದಿತ್ತು. ಒಳ ಪ್ರವೇಶಿಸಿದವರಿಗೆ ಶೈನಿಯನ್ನು ಹುಡುಕುವುದೇ ದುಸ್ತರವೆನಿಸತೊಡಗಿತ್ತು.

ಒಂದೊಂದು ರೊಬೋಗಳಿಗೆ ಒಂದೊಂದು ಹಾಸಿಗೆಯಂತಹ ಉದ್ದನೆಯ ಮೇಜು ಇಲ್ಲವೇ ನಿಲ್ಲಿಸಲು ಸಹಕಾರಿ ಪರಿಕರಗಳಿದ್ದವು. ಅವುಗಳಲ್ಲಿ ಒಂದೆರಡು ಬಿಟ್ಟರೆ ಉಳಿದವೆಲ್ಲವೂ ಭರ್ತಿಯಾಗಿದ್ದವು.

ವಿಶಾಲವಾದ ಈ ಕ್ಲಿನಿಕ್‌ನ ಯಾವುದೋ ಒಂದು ಮೂಲೆಯಲ್ಲಿ ರೊಬೋ ದುರಸ್ತಿ ಕಾರ್ಯದಲ್ಲಿ ತನ್ನ ಸಹೋದ್ಯೋಗಿಗಳೊಂದಿಗೆ ತೊಡಗಿದ್ದ ಶೈನಿ ತನ್ನ ನೀಲಿ ಸಮವಸ್ತ್ರದೊಂದಿಗೆ ಒಂದೆರಡು ನಿಮಿಷಗಳಲ್ಲಿ ಅವಿರತ್‌ನ ಬಳಿ ಸಮೀಪಿಸಿ ಪರಿಚಿತನೆಂಬಂತೆ ಸ್ವಾಗತ ಕೋರಿದ್ದ, 'ನಿಮ್ಮ ರೊಬೋ ಐಡಿ ನೀಡಿ' ಎಂದಾಗ ಇಬ್ಬರೂ ತಮಗೆ ನೀಡಲಾದ ಸಂದೇಶಗಳನ್ನು ತೋರಿಸಿದ್ದರು.

'ಅವಿರತ್, ನಿಮ್ಮ ರೊಬೋಗಳ ಚೆಕ್ ಅಪ್ ಆಗಿದೆ. ಅದರ ಬ್ಯಾಟರಿ ಜೀರೋ ತಲುಪುವವರೆಗೆ ಸುಮ್ಮನಿರಬೇಡಿ. ಮುಂಚಿತವಾಗಿಯೇ ಬ್ಯಾಟರಿ ಚಾರ್ಜ್ ಮಾಡಿಸಿ. ಇಲ್ಲದಿದ್ದರೆ ಅವುಗಳು ನಿಶ್ಚಲವಾಗಿ ಬಿಟ್ಟು ಯಾವುದೋ ದುರಸ್ತಿಯಾಗಬೇಕಿದೆ ಎಂಬುದನ್ನು ಸೂಚಿಸುತ್ತಿರುತ್ತದೆ.'

'ಶೈನಿ, ನಾನು ನನ್ನ ರೊಬೋಗಳ ಎದೆಯ ಮೇಲೆ ಅಳವಡಿಸಲಾಗಿರುವ ಕೆಂಪು ಬಟನ್‌ಗಳೆಡೆ ದಿನವೂ ಗಮನಹರಿಸಿ ಅದರಲ್ಲಿ ಉಳಿದಿರುವ ಚಾರ್ಜ್ ಅನ್ನು ನೋಡುತ್ತಿರುತ್ತೇನೆ. ಆದರೆ ನಿಮಗೆ ದೂರು ನೀಡಿರುವಂತೆ ನನ್ನ ರೊಬೋಗಳ ಚಾರ್ಜ್ ಇರುವಾಗಲೇ ಅವುಗಳು ನಿಶ್ಚಲವಾಗಿ ಬಿಟ್ಟಿದ್ದವು.'

'ಬಹುಶಃ ನೀವು ಆ ರೊಬೋಗಳನ್ನು ಬಳಸದಿರುವಾಗ ಅವುಗಳ ಬ್ಯಾಟರಿ ಆಫ್ ಮಾಡಿರಲಿಲ್ಲವೇನೋ. ಬ್ಯಾಟರಿ ಸಂಪೂರ್ಣ ಶುಷ್ಕವಾಗಿದ್ದವು.'

ನಂತರ ಹನ್ಸಾಳೆಡೆ ತಿರುಗಿ, 'ಇನ್ನು ಹನ್ಸಾ ಮ್ಯಾಮ್. ನಿಮ್ಮ ರೊಬೋ ಯಾವುದೋ ಕನ್‌ಫ್ರಂಟೇಶನ್‌ನಲ್ಲಿ ಭಾಗಿಯಾಗಿದ್ದು, ಅದರ ತಲೆ ಹಾಗೂ ಎದೆಯ ಭಾಗದಲ್ಲಿ ಊನವಾಗಿತ್ತು. ಕಂಪನಿ ತಯಾರಕರ ವಾರಂಟಿ ಇನ್ನೂ ಜಾರಿಯಲ್ಲಿದ್ದರಿಂದ ಅವರಿಂದ ಬಿಡಿ ಭಾಗಗಳನ್ನು ತರಿಸಿ ದುರಸ್ತಿಗೊಳಿಸುವುದು ಕಷ್ಟವಾಗಲಿಲ್ಲ.'

'ಹಾಗಾದರೆ ನನ್ನ 'ಎಕ್ಸ್' ರೊಬೋ ಸುಸ್ಥಿತಿಯಲ್ಲಿರುವುದೇ? ಈಗ ಎಲ್ಲಿದೆ?' ಎಂದು ಆತುರಾತುರವಾಗಿ ಸುತ್ತಲೂ ಕಣ್ಣು ಹಾಯಿಸಿದಳು.

ಶೈನಿ ಅವಳ ಕಾಳಜಿಗೆ ತನ್ನೊಳಗೇ ಮುಗುಳುನಕ್ಕು, 'ನಿಮ್ಮ ರೊಬೋ ಚಿಕಿತ್ಸೆ ಇನ್ನೇನು ಮುಕ್ತಾಯಗೊಳ್ಳಲಿದೆ. ನಿಮಗೆ ಅದನ್ನು ಒಪ್ಪಿಸುವ ಮುನ್ನ ಅದರ ಕೊನೆಯ ಸಹಿಷ್ಣುತಾ ಪರೀಕ್ಷೆ ಆಗಬೇಕಿದೆ. ಬನ್ನಿ, ಅದರ ಕ್ಷೇಮ ವಿಚಾರಿಸುವಿರಂತೆ' ಎಂದ. ಅವನು ಕರೆದೊಯ್ದ ಕಡೆ ಹೆಜ್ಜೆ ಹಾಕಿದಳು. ಒಂದು ಉದ್ದನೆ ಪರೀಕ್ಷಾ ಮೇಜಿನ ಮೇಲೆ ಮಲಗಿಸಿದ್ದ 'ಎಕ್ಸ್' ರೊಬೋಗೆ ಆ ಕಾರ್ಯಾಗಾರದಲ್ಲಿದ್ದ ಇತರೆ ರೊಬೋಗಳೇ ಪರೀಕ್ಷೆ ಮಾಡುವ ದೃಶ್ಯ ಕಾಣಿಸಿತ್ತು.

'ಹಲೋ ಎಕ್ಸ್. ನಿನ್ನನ್ನು ನೋಡಲು ಯಾರು ಬಂದಿದ್ದಾರೆ ನೋಡು' ಎಂದು ಶೈನಿ ಪರಿಚಿತನಂತೆ ಮಾತನಾಡಿಸಿದಾಗ ಪರೀಕ್ಷೆಗಳಿಗೆ ಮೈಯೊಡ್ಡಿ ಮಲಗಿದ್ದ ಎಕ್ಸ್ ಧ್ವನಿ ಬಂದೆಡೆ ತನ್ನ ಕತ್ತನ್ನು ಹೊರಳಿಸಿತ್ತು. ಹನ್ಸಾಳ ಗುರುತು ಹಿಡಿಯುತ್ತಲೇ 'ಹಲೋ ಹನ್ಸ್' ಎಂದು ತನ್ನ ಕಂಚಿನ ಕಂಠದಲ್ಲಿ ನುಡಿದಿತ್ತು.

'ಎಕ್ಸ್ ಈಗ ಹೇಗಿದ್ದೀ' ಎಂದು ಪರೀಕ್ಷಾತ್ಮಕವಾಗಿ ಅದರ ಅಂಗಾಂಗಗಳೆಡೆ ದೃಷ್ಟಿ ಹಾಯಿಸಿದಳು. ಅದರ ಎದೆಯ ಭಾಗಕ್ಕೆ ಆದ ಊನವನ್ನು ಕೃತಕ ಕವಚಗಳಿಂದ ಸರಿಪಡಿಸಲಾಗಿದ್ದರೂ ತಲೆಭಾಗದ ಹೊರಚಿಪ್ಪನ್ನು ತೆರೆದಿದ್ದು ಅದರೊಳಗಿನ ತಂತಿ ವ್ಯವಸ್ಥೆ ಹೊರನೋಟಕ್ಕೆ ಕಾಣಸಿಗುತ್ತಿತ್ತು.

'ಇದೇನು ಮಿ. ಶೈನಿಯವರೇ. ಎಕ್ಸ್‌ನ ತಲೆಯ ಭಾಗದ ದುರಸ್ತಿ ಇನ್ನೂ ಮುಗಿದಿಲ್ಲವೆಂಬಂತೆ ಕಾಣಿಸ್ತಿದೆ.'

'ನಿಮ್ಮ ಊಹೆ ನಿಜ ಹನ್ಸಾ ಮೇಡಂ. ಈ ರೊಬೋನ ಮೂಲ ನಿಯಂತ್ರಣ ಕೇಂದ್ರ ಇದ್ದಿದ್ದು ಅದರ ಶಿರದಲ್ಲಿಯೇ. ಆದ್ದರಿಂದ ಅದರ ಶಿರಕ್ಕೆ ಪೆಟ್ಟಾದಾಗ ಸುಮಾರು ಒಂದು ಗಂಟೆ ಕಾಲ ಅದರ ಸಹಿಷ್ಣುತಾ ಸಾಮರ್ಥ್ಯವು ಅದನ್ನು ಸುಸ್ಥಿತಿಯಲ್ಲಿರಿಸಿತ್ತು. ಅನಂತರ ದುರಸ್ತಿಗೆ ಇಲ್ಲಿ ಕಳುಹಿಸಿದ ಬಳಿಕ ಅನೇಕ ಪರೀಕ್ಷೆಗಳಿಗೆ ಒಳಪಡಿಸಿ ಅದರ ಮೂಲ ನಿಯಂತ್ರಣ ವ್ಯವಸ್ಥೆ ಕುಸಿಯುವ ಮಟ್ಟಕ್ಕೆ ಬಂದಿದೆ ಎಂಬ ಫಲಿತಾಂಶ ದೊರಕಿತ್ತು. ಕೆಲವು ಸಣ್ಣ ಬಿಡಿ ತಂತುಗಳನ್ನು ಅಳವಡಿಸಬೇಕಾದರೂ ಪ್ಲಾಸ್ಟಿಕ್ ಹಾಗೂ ಲೋಹವನ್ನು ಜೀವಂತ ಮಾಂಸಖಂಡದ ಊತಕದೊಂದಿಗೆ ಮಿಶ್ರಣ ಮಾಡಿ ಕೃತಕವಾಗಿ ಬೆಳೆಸಬೇಕಾದ್ದರಿಂದ ಸಮಯ ತಗುಲಿದೆ. ಇನ್ನೂ ಕೊಂಚ ಕೆಲಸ ಬಾಕಿ ಇದೆ' ಎಂದು ಶೈನಿ ವಿಳಂಬಕ್ಕೆ ಕಾರಣ ನೀಡಿದ್ದರಿಂದ, ತಾನು ಕಾಯಬೇಕಾಗುತ್ತದೆ ಎಂದು ಹನ್ಸಾಳಿಗೆ ಮನವರಿಕೆಯಾಗಿತ್ತು.

'ಇಲ್ಲಿ ಮಾಂಸಖಂಡವನ್ನು ಕೃತಕವಾಗಿ ಬೆಳೆಸುವುದಲ್ಲದೆ ಪ್ರಾಣಿ–ಪಕ್ಷಿ ಹಾಗೂ ಮಾನವರ ನಡಿಗೆ, ಅವಯವಗಳ ಬಳಕೆ, ವಿಕಸನ ಕ್ರಿಯೆ, ಇತ್ಯಾದಿ ಕುರಿತು ಸಂಶೋಧನೆಗಳು ನಡೆಯುತ್ತಿರುತ್ತವೆ. ಅದಕ್ಕೆ ತಕ್ಕಂತೆ